# <u>ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.</u>

## <u>ಎಸ್.ಸಿ. 61/2025</u>

1. ಸೈದಾಪೂರ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ನಾಗರೆಡ್ಡಿ .....ಆರೋಪಿ

ದೋಷಾರೋಪಣೆ

ನಾನು ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ನಾಗರೆಡ್ಡಿ ತಂದೆ ಶರಣಪ್ಪ ಕಾಳೆಬೆಳಗುಂದಿ, ವಯಸ್ಸುಃ 30 ವರ್ಷ, ಉದ್ಯೋಗಃ ಕೂಲಿಕೆಲಸ ಸಾಃ ತುರಕನದೊಡ್ಡಿ, ತಾಃ ಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಸೈದಾಪುಹ ಪೊಲೀಸ ಠಾಣಾ ಹದ್ದಿಯ ಪೈಕಿ ತುರಕನದೊಡ್ಡಿ ಗ್ರಾಮದಲ್ಲಿ ಕ್ಷೌರೀಕ ವೃತ್ತಿ ಮಾಡುವವರು ಇಲ್ಲದ ಕಾರಣ ವಾಡಿಕೆಯಂತೆ ಅಜಲಾಪೂರ ಗ್ರಾಮದ ನಿವಾಸಿತರಾದ ಚಾಸಾ-7, 8 ರವರು ತುಕರಕನದೊಡ್ಡಿ ಗ್ರಾಮಕ್ಕೆ ಕ್ಷೌರೀಕ ಕೆಲಸ ಮಾಡಲು ದಿಃ 01.05.2025 ರಂದು ಹೋಗಿರುತ್ತಾರೆ, ಕ್ಷೌರೀಕನಾದ ಚಾಸಾ-7 ರವರು ತುರಕನದೊಡ್ಡಿ ಗ್ರಾಮದ ಸರಕಾರಿ ಶಾಲೆಯ ಹಳೆ ಕಟ್ಟಡ ಮುಂದುಗಡೆ ಖುಲ್ಲಾ ಜಾಗದಲ್ಲಿ ತುರಕನದೊಡ್ಡಿ ಗ್ರಾಮದ ಸಾರ್ವಜನಿಕರಿಗೆ ಕಟ್ಟಿಂಗ್ ಮತ್ತು ಸೇವಿಂಗ್ ಮಾಡುತ್ತಿರುವದನ್ನು ಚಾಸಾ-1 ರವರನ್ನು ನೋಡಿ ಅಲ್ಲಿಗೆ ಹೋಗಿ ಚಾಸಾ-7 ರವರಿಗೆ ಮಕ್ಕಳು ವಿಧ್ಯಾಭ್ಯಾಸ ಮಾಡುವ ಸ್ಥಳದಲ್ಲಿ ಕಟಿಂಗ್ ಮಾಡುವುದು ಸರಿಯಲ್ಲ ಅಂತಾ ಹೇಳಿದ್ದು, ಅದಕ್ಕೆ ಚಾಸಾ-7 ರವರು ಚಾಸಾ-6 ನಿಂಗಪ್ಪನ ಕಟ್ಟಿಂಗ್ ಮುಗಿದ ನಂತರ ಬೇರೆ ಕಡೆಗೆ ಹೋಗುತ್ತೇನೆ ಅಂತಾ ಹೇಳಿರುತ್ತಾರೆ, ಬೇರೆಕಡೆಗೆ ಎಲ್ಲಿ ಹೋಗುವುದಿಲ್ಲ ನನಗೂ ಸಹ ಇಲ್ಲೇ ಕಟಿಂಗ್ ಮಾಡಬೇಕು ಅಂತಾ ಅಲ್ಲೇ ಕುಂತಿದ್ದ ಆರೋಪಿಯಾದ ನೀನು ಚಾಸಾ-7 ರವರಿಗೆ ಹೇಳಿದ್ದು, ಅದಕ್ಕೆ ಚಾಸಾ-1 ಈತನು ಊರಲ್ಲಿ ಸಾಕಷ್ಟು ಸ್ಥಳವಿದೆ ಊರಿನ ಎಲ್ಲರ ಮಕ್ಕಳು ಶಾಲೆಗೆ ಬರುತ್ತಾರೆ ಅಂತಾ ಅಂದಾಗ ಊರಿನ ಊಸಾಬರಿ ನಿನಗ್ಯಾಕ ಬೇಕಲೇ ಸೂಳೆ ಮಗನ್ಯಾ ಕುಂಡಿ ಮುಚ್ಚಿಕೊಂಡು ಇಲ್ಲಿಂದ ಹೋಗು ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀನು ಭಾರತೀಯ ನ್ಯಾಯ ಸಂಹಿತೆ

ಕಲಂ. 352 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-7 ರವರ ಕೈಯಲ್ಲಿದ್ದ ಕಬ್ಬಿಣದ ಕತ್ತರಿಯನ್ನು ಕಸಿದುಕೊಂಡು ದಿಃ 01.05.2025 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ತುರಕನದೊಡ್ಡಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯ ಮುಂದಿನ ಖುಲ್ಲಾ ಸ್ಥಳದಲ್ಲಿ ಚಾಸಾ-1 ರವರ ಕುತ್ತಿಗೆಗೆ, ಬೆನ್ನು ಹಾಗೂ ಎರಡು ಕೈಗಳ ತೋಳುಗಳಿಗೆ ಮತ್ತು ಎಡಪಕ್ಕೆಗೆ ಕಬ್ಬಿಣದ ಕತ್ತರಿಯಿಂದ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದ್ದು, ಆ ಮೂಲಕ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ. 109 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-1 ರವರು ನೋವು ತಾಳದೆ ಚೀರಾಡಿದಾಗ ಅಲ್ಲೇ ಸಮೀಪವಿದ್ದ ಚಾಸಾ-4, 5 ರವರು ಓಡಿಹೋಗಿ ಚಾಸಾ-1 ರವರಿಗೆ ಪಕ್ಕಕ್ಕೆ ಎಳೆದುಕೊಂಡು ಕೂಡಿಸಿರುತ್ತಾರೆ, ಆಗಲು ಸಹ ಆಪಾದಿತನು ಮಗನ್ಯಾ ಇಂದು ನನ್ನ ಕೈಯಾಗ ಉಳಿದಿ ಮತ್ತೊಮ್ಮೆ ನಿನ್ನ ಸುದ್ದಿ ನೋಡ್ತಿನಿ ಅಂತಾ ತನ್ನ ಕೈಯಲ್ಲಿದ್ದ ಕಬ್ಬಿಣದ ಕತ್ತರಿ ಅಲ್ಲೇ ಬಿಸಾಡಿ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ. 351(3) ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 23.02.2026 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.